ಆ) ಕರ್ನಾಟಕ ರಾಜ್ಯದಲ್ಲಿ ಒಟ್ಟು ಭೂ ಪ್ರದೇಶವು 1,90,49,836 ಹೆಕ್ಟೇರ್ ಇದ್ದು ಇದರಲ್ಲಿ ಅರಣ್ಯ ಪ್ರದೇಶದ ವಿಸ್ತೀರ್ಣ 38,28,428 ಹೆಕ್ಟೇರ್.

ಇ) ಹೌದು.

ಈ) ರಾಷ್ಟ್ರೀಯ ಸರಾಸರಿ ಮಟ್ಟವನ್ನು ಮುಟ್ಟಲು ಅರಣ್ಯೀಕರಣ ಕಾರ್ಯಕ್ರಮವನ್ನು ಒಳಗೊಂಡ ರಾಜ್ಯ, ಕೇಂದ್ರ ಪುರಸ್ಕೃತ, ಕೇಂದ್ರ ವಲಯ, ಗ್ರಾಮೀಣ ಅಭಿವೃದ್ಧಿ ಹಾಗೂ ವಿದೇಶಿ ನೆರವಿನ ಯೋಜನೆಗಳನ್ನು ಹಮ್ಮಿಕೊಂಡಿದೆ. ಈ ಯೋಜನೆಗಳಡಿಯಲ್ಲಿ ಕ್ಷೀಣಿತ ಅರಣ್ಯಪ್ರದೇಶಗಳನ್ನು ಪುನಶ್ಚೇತನಗೊಳಿಸಲಾಗುತ್ತಿದೆ. ಅವಶ್ಯವೆನಿಸಿದ ಪ್ರದೇಶಗಳಲ್ಲಿ ಸಸಿಗಳನ್ನು ಮರುನಾಟಿ ಮಾಡಲಾಗುತ್ತಿದೆ. ಇದಲ್ಲದೆ ಕಾಯ್ದಿಟ್ಟ ಅರಣ್ಯ ಪ್ರದೇಶಗಳ ಹೊರಗಡೆ ಇರುವಂತಹ ಪಾಳು ಭೂಮಿ ಗ್ರಾಮ ಸಮುದಾಯ ಜಮೀನುಗಳು, ರೈಲ್ವೆಲೈನ್‌ಗಳ ಬದಿಯಲ್ಲಿ, ರಸ್ತೆಗಳ ಇಕ್ಕೆಡೆಗಳಲ್ಲಿ, ಸಾರ್ವಜನಿಕ ಸಂಸ್ಥೆಗಳ ಬಳಿ ಇರುವ ಜಮೀನುಗಳಲ್ಲಿ, ಶಾಲಾ ಕಾಲೇಜು ಮತ್ತು ಪಂಚಾಯತ್ ಕಛೇರಿಗಳ ಆವರಣಗಳಲ್ಲಿ ಅರಣ್ಯ ವಿಸ್ತೀರ್ಣ ಕಾರ್ಯಕ್ರಮಗಳನ್ನು ತೆಗೆದುಕೊಳ್ಳಲಾಗುತ್ತಿದೆ. ಮೇಲ್ಕಂಡ ಪ್ರದೇಶಗಳಲ್ಲಿ 8ನೇ ಪಂಚವಾರ್ಷಿಕ ಯೋಜನೆ ಅಂದರೆ 1992-93 ರಿಂದ 1996-97ರ ಅವಧಿಯಲ್ಲಿ ಅರಣ್ಯ ಭೂಮಿ, ಇತರ ಸರ್ಕಾರಿ ಭೂಮಿ ಸಾರ್ವಜನಿಕ ಹಾಗೂ ಗ್ರಾಮ ಸಮೂದಾಯದ 2,67,709 ಹೆಕ್ಟೇರ್ ಪ್ರದೇಶದಲ್ಲಿ ನೆಡುತೋಪುಗಳನ್ನು ನಿರ್ಮಿಸಲಾಗಿದೆ. ಇದೇ ಅವಧಿಯಲ್ಲಿ ಖಾಸಗಿ ಜಮೀನಿನಲ್ಲಿ ನಾಟಿ ಮಾಡಲು ಸಾರ್ವಜನಿಕರಿಗೆ 17.549 ಕೋಟಿ ಸಸಿಗಳನ್ನು ವಿತರಿಸಲಾಗಿದೆ. ಅಲ್ಲದೆ 1997-98ರಿಂದ ಒ.ಇ.ಸಿ.ಎಫ್ ಜಪಾನ್ ದೇಶದ ನೆರವಿನಿಂದ ಜಾರಿಗೊಳಿಸಲಾಗುತ್ತಿರುವ 5 ವರ್ಷ ಯೋಜನೆಯಲ್ಲಿ ಅರಣ್ಯಾಭಿವೃದ್ಧಿಯನ್ನು ಕೈಗೊಳ್ಳಲಾಗುತ್ತಿದೆ.

(3) ಪ್ರಕಟಣೆ

ಅಧ್ಯಕ್ಷರು: ದಿನಾಂಕ 9ನೇ ಮಾರ್ಚ್ 1998ರಂದು ನಡೆದ ವಿಧಾನ ಸಭೆಯ ಕಾರ್ಯಕಲಾಪಗಳ ಸಲಹಾ ಸಮಿತಿಯು ದಿನಾಂಕ 10.3.1998ರಿಂದ 27.3.1998ರವರೆಗೆ ಈ ಕೆಳಕಂಡಂತೆ ಕಾರ್ಯಕಲಾಪಗಳನ್ನು ನಡೆಸಲು ತೀರ್ಮಾನಿಸಿತು.

10-03-1998 ಮಂಗಳವಾರ 11-03-1998 ಬುಧವಾರ 12-03-1998 ಗುರುವಾರ	1)	ಪ್ರಶ್ನೋತ್ತರ
	2)	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣ ಪ್ರಸ್ತಾವದ ಮೇಲೆ ಚರ್ಚೆ.

13-03- 1998 ಶುಕ್ರವಾರ	1) 2) 3)	ಪ್ರಶ್ನೋತ್ತರ ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ. ಖಾಸಗಿ ಕಾರ್ಯಕಲಾಪಗಳು.
14-03- 1998 ಶನಿವಾರ		ಉಪವೇಶನ ಇರುವುದಿಲ್ಲ.
15-03- 1998 ಭಾನುವಾರ		ರಜಾ ದಿನ
16-03- 1998 ಸೋಮವಾರ		ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ಚರ್ಚೆ
17-03- 1998 ಮಂಗಳವಾರ	1) 2)	ರಾಜ್ಯಪಾಲರ ಭಾಷಣಕ್ಕೆ ಸಂಬಂಧಿಸಿದ ವಂದನಾರ್ಪಣಾ ಪ್ರಸ್ತಾವದ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು. ಶಾಸನ ರಚನೆ.
18-03- 1998 ಬುಧವಾರ		1998-99ನೇ ಸಾಲಿನ ಆಯವ್ಯಯ ಮಂಡನೆ
19-03- 1998 ಗುರುವಾರ	1) 2)	1998-99ನೇ ಸಾಲಿನ ಆಯವ್ಯಯ ಮಂಡನೆಯ ಮೇಲೆ ಸಾಮಾನ್ಯ ಚರ್ಚೆ. ಶಾಸನ ರಚನೆ.
20-03- 1998 ಶುಕ್ರವಾರ	1) 2) 3) 4)	ಪ್ರಶ್ನೋತ್ತರ 1998-99ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ. ಶಾಸನಾತ್ಮಕ ನಿರ್ಣಯ ಖಾಸಗಿ ಕಾರ್ಯಕಲಾಪಗಳು
21-03- 1998 ಶನಿವಾರ		ಉಪವೇಶನ ಇರುವುದಿಲ್ಲ.

22-03- 1998 ಭಾನುವಾರ		ರಜಾ ದಿನ.
23-03- 1998 ಸೋಮವಾರ	1) 2)	ಪ್ರಶ್ನೋತ್ತರ 1998-99ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ.
24-030- 1998 ಮಂಗಳವಾರ	1) 2) 3)	ಪ್ರಶ್ನೋತ್ತರ 1998-99ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ. 1997-98ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮಂಡನೆ.
25-03- 1998 ಬುಧವಾರ	1) 2) 3)	ಪ್ರಶ್ನೋತ್ತರ 1998-99ನೇ ಸಾಲಿನ ಆಯವ್ಯಯದ ಮೇಲೆ ಸಾಮಾನ್ಯ ಚರ್ಚೆ. ಶಾಸನ ರಚನೆ.
26-03- 1998 ಗುರುವಾರ	1) 2) 3) 4)	ಪ್ರಶ್ನೋತ್ತರ 1998-99ನೇ ಸಾಲಿನ ಆಯವ್ಯಯದ ಮೇಲೆ ನಡೆದ ಚರ್ಚೆಗೆ ಸರ್ಕಾರದಿಂದ ಉತ್ತರ ಹಾಗೂ ಮತಕ್ಕೆ ಹಾಕುವುದು. 1997-98ನೇ ಸಾಲಿನ ಪೂರಕ ಅಂದಾಜುಗಳ (ಮೊದಲನೇ ಕಂತು) ಮೇಲೆ ಚರ್ಚೆ ಹಾಗೂ ಮತಕ್ಕೆ ಹಾಕುವುದು. ಧನವಿನಿಯೋಗ ವಿಧೇಯಕಗಳ ಮಂಡನೆ ಹಾಗೂ ಅಂಗೀಕಾರ.
27-03- 1998 ಶುಕ್ರವಾರ	1) 2) 3)	ಪ್ರಶ್ನೋತ್ತರ ಶಾಸನ ರಚನೆ ತೆರಿಗೆ ವಿಧೇಯಕಗಳ ಮಂಡನೆ ಹಾಗೂ ಅಂಗೀಕಾರ.

ಈ ಶಿಫಾರಸ್ಸುಗಳನ್ನು ಸದನವು ಅಂಗೀಕರಿಸಿತೆಂದು ಭಾವಿಸುತ್ತೇನೆ.